**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ 17-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No. 1787/2022

DW-1

ಸಾಕ್ಷಿದಾರರ ಹೆಸರು - ಕಲ್ಲಯ್ಯಾ ವಿರುಪಾಕ್ಷಯ್ಯಾ ಇಂದರಗಿಮಠ

ವಯಸ್ಸು - 47 ವರ್ಷ

ಉದ್ಯೋಗ - ವ್ಯಾಪಾರ

ಸಾಕೀನ - ಕಣಕಾಪೂರ, ತಾಃ ಜಿಃ ಕೊಪ್ಪಳ

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

1) ನನ್ನ ಸ್ವಂತ ಊರು ಕಣಕಾಪೂರವಾಗಿದ್ದು ಅಲ್ಲಿಯೇ ವಾಸವಾಗಿರುತ್ತೇನೆ. ನಾನು ಗಿಣಿಗೇರಾದಲ್ಲಿರುವ ಫ್ಯಾಕ್ಟರಿಯಲ್ಲಿ ಲೇಬರ ಕಾಂಟ್ರಾಕ್ಟರ ಎಂದು ಕೆಲಸ ಮಾಡುತ್ತೇನೆ. ಮೊದಲು ನಾನೊಬ್ಬನೆ ಕೆಲಸ ಮಾಡುತ್ತಿದ್ದು ನಂತರ ರಾಹುಲ ಸಾತಪುತೆ ಎನ್ನುವವರ ಜೊತೆ ಕೆಲಸ ಮಾಡಿರುತ್ತೇನೆ. ಸದರಿ ರಾಹುಲ ಅವರು ಗೋಕಾಕಿನವರಾಗಿರುತ್ತಾರೆ. ರಾಹುಲ ಅವರು ನನಗೆ ಮಹೇಶ ಸಾತಪುತೆ ರವರಿಂದ ಪರಿಚಯವಾಗಿರುತ್ತಾರೆ. ನಾನು ರಾಹುಲ ರವರ ಜೊತೆ ವ್ಯವಹಾರವನ್ನು ಹೊಂದಿದ್ದೆ. ಪಿರ್ಯಾದಿದಾರರು ಸದರಿ ರಾಹುಲ ರವರ ತಂದೆ ಎಂದು ಮಾತ್ರ ಗೊತ್ತಿದ್ದು ಅವರ ವೈಯಕ್ತಿಕ ಪರಿಚಯ ಇರುವುದಿಲ್ಲ. ಪಿರ್ಯಾದಿಯ ಜೊತೆ ನಾನು ಯಾವುದೇ ವ್ಯವಹಾರ ಮಾಡಿರುವುದಿಲ್ಲ. ನಾನು ಪಿರ್ಯಾದಿದಾರರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ, ಆದರೆ ಅವರ ಮಗ ರಾಹುಲ ರವರಿಗೆ ಕೊಟ್ಟಿದ್ದೆ. ನಾನು ಹಾಗೂ ರಾಹುಲ ಒಟ್ಟಿಗೆ ಜಂಟಿಯಾಗಿ ಕೆಲಸ

ಮಾಡುತ್ತಿದ್ದ ಕಾರಣ ಅವರಿಗೆ ನಾಲ್ಕು ಖಾಲಿ ಚೆಕ್ಕಗಳನ್ನು ನೀಡಿದ್ದೆ. ಪ್ರಸ್ತುತ ಪ್ರಕರಣದಲ್ಲಿರುವ ನಿಪಿ-1 ಸದರಿ ನಾಲ್ಕು ಚೆಕ್ಕಗಳಲ್ಲಿ ಒಂದು ಚೆಕ್ಕಾಗಿರುತ್ತದೆ. ನಿಪಿ-1 ನ್ನು ನಾನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಪ್ರಸ್ತುತ ಪ್ರಕರಣವನ್ನು ಪಿರ್ಯಾದಿದಾರರು ದಾಖಲಿಸಿದ ನಂತರ ನಾನು ರಾಹುಲ ಅವರಿಗೆ ಅವರು ನವೆಂಬರನಲ್ಲಿ ರೂ. 5,37,000/- ಹಣವನ್ನು ವಿತ್‌ಡ್ರಾ ಮಾಡಿಕೊಂಡಾಗ, ಹಣವನ್ನು ಪಡೆದರೂ ಸಹ ಏತಕ್ಕಾಗಿ ನಾನು ನೀಡಿದ ಚೆಕ್ಕನ್ನು ಬಳಸಿಕೊಂಡು ಪ್ರಕರಣ ದಾಖಲಿಸಿರುತ್ತೀರಿ ಎಂದು ಕೇಳಿದಾಗ ಅವರು ತಾವು ದಾಖಲಿಸಿರುವುದಿಲ್ಲ ತಮ್ಮ ತಂದೆ ದಾಖಲಿಸಿರುತ್ತಾರೆ ಎಂದು ಹೇಳಿರುತ್ತಾರೆ. ನಂತರ ನಾನು ಪಿರ್ಯಾದಿದಾರರೊಂದಿಗೆ ಯಾವುದೇ ವ್ಯವಹಾರ ಮಾಡಿರದ ಕಾರಣ ಪಿರ್ಯಾದಿದಾರರಿಗೆ ಏನು ಕೇಳಿರುವುದಿಲ್ಲ.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.